O.S. 165/2021 PW-2

ದಿನಾಂಕಃ 28.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು 10ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿಗೆ ಹೊಂದಿಕೊಂಡತೆ ನಿವೇಶನ ಇಲ್ಲ ಎಂದರೆ ಸರಿ. ಸಪ್ತಗಿರಿ ಬಡಾವಣೆಯಿಂದ ನಾಯಕರಹಟ್ಟಿಗೆ 1.50 ಕಿ.ಮಿ. ದೂರವಿರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿದ ದಾವಾ ಆಸ್ತಿಯ ವಿಸ್ತೀರ್ಣಕ್ಕೆ ಸಂಬಂಧಿಸಿದ ಅಸ್ಸೆಸ್ ಮೆಂಟ್ ಸಂಖ್ಯೆ ನನಗೆ ಗೊತ್ತಿಲ್ಲ. ವಾದಿಗಳು ಅವರ ನಿವೇಶನದಲ್ಲಿಪೂರ್ತಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ಪ್ರತಿವಾದಿಗಳ ಮನೆಯ ದಕ್ಷಿಣ ದಿಕ್ಕಿಗೆ ಶೌಚಾಲಯ ವಿರುತ್ತದೆ ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಶೌಚಾಲಯ ಸಿಮೆಂಟ್ ಶೀಟಿನಿಂದ ಮುಚ್ಚಲ್ಪಟ್ಟಿರುತ್ತದೆ. 4 ವರ್ಷಗಳ ಹಿಂದೆ ಅದನ್ನು ನಿರ್ಮಿಸಲಾಗಿರುತ್ತದೆ. ವಾದಿಯು 2021ರಲ್ಲಿ ದಾವೆ ದಾಖಲಿಸಿರುತ್ತಾರೆ ದಿನಾಂಕ ನನಗೆ ಗೊತ್ತಿಲ್ಲ. ವಾದಿಯ ಮನೆಯಲ್ಲಿ ನಾನು ಬಾಡಿಗೆ ದಾರನಾಗಿ ವಾಸವಿದ್ದೇನೆ ಎಂದರೆ ಸರಿ. ನಾನು ದಾವಾ ಸ್ವತ್ತಿನ ಬಳಿ ಸದಾ ಹೋಗುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರು ಲಕ್ಷ್ಮಣ. ನಮ್ಮ ತಾತನವರ ಹೆಸರು ಓಬನಾಯಕ. O.S.No.258/2010ರಲ್ಲಿ ನಮ್ಮ ತಂದೆಯವರು ವಾದಿಯ ಪರವಾಗಿ ಸಾಕ್ಷಿ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ಪ್ರತಿವಾದಿಗಳಿಗೆ ಒಟ್ಟು ಎರಡು ಮನೆಗಳು ಇದ್ದು ಪೂರ್ವ ದಿಕ್ಕಿಗೆ ಬಾಗಿಲುಗಳು ಇರುತ್ತದೆ. ಪ್ರತಿವಾದಿಗಳ ಮನೆಯ ಬಾಗಿಲು ಉತ್ತರ ದಿಕ್ಕಿಗೆ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಗಳು ಶೌಚಾಲಯಕ್ಕೆ ಹೋಗಲು ಬಿಟ್ಟುಕೊಂಡಿರುವ ಜಾಗ ಎಂದರೆ ಸರಿಯಲ್ಲ. ವಾದಿಗಳ ಸ್ವತ್ತಿನ ದಕ್ಷಿಣ ದಿಕ್ಕಿಗೆ ಗೋಡೆ ಇದೆ ಎಂದರೆ ಸರಿ. ವಾದಿಗಳ ಮನೆಯ ಪೂರ್ವ ದಿಕ್ಕಿಗೆ ಬಾಗಿಲು ಇದೆ ಎಂದರೆ ಸರಿ. ವಾದಿಯವರ ಉತ್ತರ ದಿಕ್ಕಿಗೆ 6 ಅಡಿ ಗಲ್ಲಿ ಇದೆ ಎಂದರೆ ಸರಿಯಲ್ಲ. ಗಲ್ಲಿ ಇದ್ದರು ಸಹ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಗಳ ಮನೆಯಲ್ಲಿ ಬಾಡಿಗೆ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.